

# ಕುಷನ್ ವಿನ್ಯಾಸದ ಕೈಚಳಕ

**ಗೃಹಾಲಂಕಾರ ಆಧುನಿಕ ಅವಶ್ಯಕತೆಗಳಲ್ಲಿ ಒಂದು. ಆದರೆ ಇದಕ್ಕೆಂದು ದುಬಾರಿ ಹಣ ತೆರುವ ಬದಲು ಮನೆಯಲ್ಲೇ ಕುಳಿತು ಕುಷನ್‌ನಲ್ಲಿ ಹಲವು ವಿನ್ಯಾಸಗಳನ್ನು ಮಾಡಬಹುದು.**

★ ಸುಮಲತಾ. ಎನ್

ಪುಟ್ಟದಾದರೂ ಸ್ವಂತ ಮನೆ ಇರಬೇಕು ಎನ್ನುವುದು ಪ್ರತಿಯೊಬ್ಬರ ಕನಸು. ಆದರೆ ಮನೆ ಮಾಡಿಕೊಂಡರೆ ಸಾಲದು, ಮನೆಗೆ ತಕ್ಕಂಥ ಅಲಂಕಾರವೂ ಬೇಡವೇ?

ಸ್ವಂತ ಗೂಡಿಗೆ ಮೆರುಗು ನೀಡಲು ಆಕಾಶದಷ್ಟು ಅವಕಾಶಗಳು ಕಣ್ಮುಂದಿವೆ. ಇದೇ ಕಾರಣಕ್ಕೆ ಗೃಹಾಲಂಕಾರ ಪರಿಕರಗಳಿಗೂ ಬೇಡಿಕೆ ದುಪ್ಪಟ್ಟಾಗಿದೆ. ಆದರೆ ಅಧಿಕ ಹಣ ತೆರಬೇಕಾದದ್ದು ಅನಿವಾರ್ಯ. ಆದ್ದರಿಂದ ಮನೆಯಲ್ಲಿದ್ದುಕೊಂಡೇ, ಸ್ವತಃ ಕಡಿಮೆ ಬೆಲೆಗೆ ಗೃಹಾಲಂಕಾರಿಕ ವಸ್ತುಗಳನ್ನು ತಯಾರಿಸುವ ಕೆಲಸದಲ್ಲಿ ತೊಡಗಿಕೊಂಡಿದ್ದಾರೆ ಬೆಂಗಳೂರಿನ ಮರಿಯಾ ಪ್ರಮೀಳಾ ಡಿಸೋಜಾ.

ಮನೆಯನ್ನು ಅಲಂಕಾರಗೊಳಿಸುವುದರೊಂದಿಗೆ ಚಿಕ್ಕ ಉದ್ಯೋಗವನ್ನೂ ಆರಂಭಿಸುವ ಉದ್ದೇಶದಿಂದ ಮರಿಯಾ ಎರಡು ವರ್ಷದ ಹಿಂದೆ ಆರಂಭಿಸಿದ್ದು `ಫ್ಲೋರಾ ಕಂಫರ್ಟ್ಸ್'. ಮನೆಯ ಅಲಂಕಾರದಲ್ಲಿ ಪೀಠೋಪಕರಣಗಳದ್ದು ಬಹುಮುಖ್ಯ ಪಾತ್ರವಾದ್ದರಿಂದ ಅವುಗಳನ್ನು ವಿನ್ಯಾಸಗೊಳಿಸುವುದಕ್ಕಾಗಿ ವಿಭಿನ್ನ ಬಗೆಯ ಕುಷನ್, ಬೆಡ್‌ಶೀಟ್‌ಗಳನ್ನು ವಿನ್ಯಾಸಗೊಳಿಸಲು ಆರಂಭಿಸಿದರು ಇವರು.

ಸಾಮಾನ್ಯ ಬಗೆಯ ಕುಷನ್‌ಗಳಿಗಿಂತ ಅತಿ ಸುಂದರವಾಗಿ ಕಾಣುವ ಈ ಕುಷನ್‌ಗಳ ವಿನ್ಯಾಸದಲ್ಲಿ ಹೂವಿಗೆ ಪ್ರಥಮ ಆದ್ಯತೆ ನೀಡುತ್ತಾರೆ ಮರಿಯಾ. ಅಷ್ಟೇ ಅಲ್ಲ, ಪ್ರಕೃತಿಯ ಹಲವು ತುಣುಕುಗಳನ್ನೂ ವಿನ್ಯಾಸಕ್ಕೆ ಒಗ್ಗಿಸಿಕೊಳ್ಳುತ್ತಾರೆ.



ಕಾಲೇಜಿನಲ್ಲಿದ್ದಾಗಲೇ ಚಿತ್ರ ಕಲೆಯ ಮೋಡಿಗೆ ಒಳಗಾದ ಇವರು ಓದಿದ್ದು ಬಿ.ಎಡ್, ಎಂ.ಎ. ನಂತರ ಹೈಸ್ಕೂಲ್‌ನಲ್ಲಿ ನಾಲ್ಕು ವರ್ಷ ಕೆಲಸ ಮಾಡಿದವರು. ಯುವಜನ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳುತ್ತಿದ್ದ ಮರಿಯಾ ತಮ್ಮದೇ ಸ್ವಂತ ಉದ್ದಿಮೆ ಆರಂಭಿಸಲು ಆರಿಸಿಕೊಂಡಿದ್ದು ವಿನ್ಯಾಸ ಕ್ಷೇತ್ರವನ್ನು.

`ಮಹಿಳೆಯರು ಬೀಡಿ ಕಟ್ಟುವ, ಇನ್ನಿತರ ಆರೋಗ್ಯಕ್ಕೆ ಮಾರಕವಾಗಬಹುದಾದ ಹಲವು ಕೆಲಸಗಳಲ್ಲಿ ತೊಡಗಿಕೊಳ್ಳುತ್ತಾರೆ. ಆದ್ದರಿಂದ ಮನೆಯಲ್ಲೇ ಕುಳಿತು ಹಣ ಗಳಿಸಲು ಸುಲಭ ದಾರಿ ಎನಿಸಿರುವ ಈ ಕಸೂತಿ ಕೆಲಸದಲ್ಲಿ ತೊಡಗಿಕೊಂಡರೆ ಆದಾಯ ಪಡೆಯಬಹುದು' ಎನ್ನುವುದು ಮರಿಯಾ ಅವರ ಅನುಭವದ ಮಾತು.

ಮೆಷಿನ್‌ಗಳು ಮನುಷ್ಯನ ಕೆಲಸವನ್ನು ಕಿತ್ತುಕೊಳ್ಳುತ್ತಿವೆ. ಆದರೆ ಇದು ಸಂಪಾದನೆಯ ಮಾರ್ಗವನ್ನೂ ಕಸಿದುಕೊಳ್ಳಬಾರದು ಎಂಬ ಕಾರಣಕ್ಕೆ ಹಲವು ಮಂದಿಗೂ ವಿನ್ಯಾಸದ ತರಬೇತಿಯನ್ನು ನೀಡುತ್ತಿದ್ದಾರೆ.

ಹಲವೆಡೆ ತಮ್ಮ ವಿನ್ಯಾಸದ ಕುಷನ್‌ಗಳ ಸಂಗ್ರಹವನ್ನು ಪ್ರದರ್ಶನಕ್ಕಿಟ್ಟಿರುವ ಮರಿಯಾಗೆ ಜನರಿಂದ ಉತ್ತಮ ಪ್ರತಿಕ್ರಿಯೆ ಬಂದಿದೆ. ಆಗಿಂದಾಗ್ಗೆ ಬೇಡಿಕೆಯೂ ಹೆಚ್ಚುತ್ತಿದೆಯಂತೆ. ಅಂಬ್ರೋಸಿಯಾ, ಅನೆಮೋನ್, ಆಸ್ಟರ್, ಬೆಗೋನಿಯಾ, ಕ್ಯಾಮೆಲಿಯಾ, ಕೊಲಂಬೈನ್, ಫ್ಲ್ಯಾಕ್ಸ್, ಫ್ರೆಸ್ಸಿಯಾ, ಗಾರ್ಡೆನಿಯಾ, ಗ್ಲೋಕ್ಸಿನಿಯಾ, ಪಿಯಾನಿ, ಪೆಟುನಿಯಾ ಹೀಗೆ ಸುಮಾರು 15 ವಿಭಿನ್ನ ವಿನ್ಯಾಸಗಳನ್ನು



ಮೂಡಿಸಿರುವ ಮರಿಯಾ ತಮ್ಮ ವಿನ್ಯಾಸಕ್ಕೆ ಆರಿಸಿಕೊಂಡಿರುವುದು ಡೂಪ್ಲಿಯನ್ ಸಿಲ್ಕ್, ಎರಡು ಶೇಡ್‌ಗಳ ಬಟ್ಟೆ, ಕ್ರಷ್ ಹಾಗೂ ಸ್ಯಾಟಿನ್ ರಿಬ್ಬನ್.

ವಿವಿಧ ರೀತಿಯ ಕೃತಕ ಹೂವುಗಳನ್ನೂ ತಯಾರಿಸುವುದರಲ್ಲಿ ಮರಿಯಾ ನಿಸ್ಸೀಮರು. ಆಧುನಿಕತೆ ಬೆಳೆದಂತೆ ಮನೆಯ ಅಲಂಕಾರಿಕ ಸಾಮಗ್ರಿಗಳಲ್ಲೂ ಸಾಕಷ್ಟು ಬದಲಾವಣೆಯಾಗುವ ಕಾರಣದಿಂದ, ಕಾಲಕ್ಕೆ ತಕ್ಕಂತೆ ತಮ್ಮ ವಿನ್ಯಾಸಗಳಲ್ಲೂ ಮಾರ್ಪಾಡು ಮಾಡಿಕೊಳ್ಳುತ್ತಾರೆ ಇವರು. ಮಹಿಳೆಯರಿಗೆಂದು ವಿನ್ಯಾಸದ ತರಗತಿಗಳನ್ನೂ ನಡೆಸುತ್ತಾರೆ.